

ಡಾ.ವಿನೋದ ಛೆಬ್ಬಿ

ಭಿನ್ನಾಭಿಪ್ರಾಯಗಳಿಂದ ಘರ್ಷಣೆ ಆಗುವುದಿಲ್ಲ. ಹಾಗಾದರೆ ಘರ್ಷಣೆಯ ಕಾರಣ ಏನು?

# 120: ಜಗಳದ ಮೂಲ-2

ತಾರುಣ್ಯ ದಾಟಿದ ಮಹೇಶ ಮಮತಾ ಇಬ್ಬರದೂ ಇದು ಎರಡನೆಯ ಮದುವೆ. ಒಂದು ಮಗುವಿದೆ. ಇಬ್ಬರ ನಡುವೆ ವಿಪರೀತ ಜಗಳವಾಗುತ್ತಿದೆ ಎಂದು ಹೋದಸಲ ಹೇಳುತ್ತಿದ್ದೆ.

'ನಿಮ್ಮಿಬ್ಬರ ಜಗಳಗಳು ಯಾವ ಕಾರಣಕ್ಕೆ ಉಂಟಾಗುತ್ತವೆ?' ಎಂದು ವಿಚಾರಿಸಿದೆ. ಇಲ್ಲಿ ನನ್ನ ಉದ್ದೇಶ ಏನಿತ್ತು? ಭಿನ್ನಾಭಿಪ್ರಾಯ ಉಂಟುಮಾಡುವ ವಿಷಯಗಳ ಬಗೆಗೆ ಮಾಹಿತಿ ಸಂಗ್ರಹಿಸುವುದು ಆಗಿರಲಿಲ್ಲ. ಜಗಳದಲ್ಲಿ ಇಬ್ಬರ ಮಾತುಗಳ ವರಸೆ ಹೇಗಿರುತ್ತದೆ, ಹಾಗೂ ಆಗ ಅವರು ತಮ್ಮೊಳಗೆ ಹುಟ್ಟುವ ಆತಂಕವನ್ನು ಹೇಗೆ ನಿಭಾಯಿಸುತ್ತಾರೆ ಎಂಬುದನ್ನು ತಿಳಿದುಕೊಳ್ಳುವುದಾಗಿತ್ತು. ಅವರಿಬ್ಬರೂ ಮಾತಾಡುವಾಗ ಒಂದು ವಿಷಯ ಹೊರಬಂತು. ಇತ್ತೀಚೆಗೆ ಅವರು ಮಹೇಶನ ಹಳ್ಳಿಗೆ ಭೇಟಿಯಿತ್ತಾಗ ಆದ ಅನುಭವವನ್ನು ಮಮತಾ ಬಣ್ಣಿಸಿದಳು: 'ಅಯ್ಯೋ ಅದೊಂದು ಹಳ್ಳಿ! ಒಂದೂ ಅನುಕೂಲತೆ ಇಲ್ಲ. ಮಗುವಿಗೆ ಕಾಯಿಲೆ ಬಂದರೆ ಡಾಕ್ಟರರೂ ಹತ್ತಿರದಲ್ಲಿಲ್ಲ. ಇವರೆಲ್ಲ ಹೇಗೆ ವಾಸ ಮಾಡುತ್ತಾರಪ್ಪಾ ಎಂದು ಆಶ್ಚರ್ಯ ಆಗುತ್ತದೆ...' ಎಂದು ಉದ್ಗಾರ ತೆಗೆದಳು. ಅದಕ್ಕೆ ಮಹೇಶ ದಂಗುಬಡಿದು ಉದ್ಗರಿಸಿದ: 'ಅರೆ, ಅಲ್ಲಿಯೇ ನಾನು ಬೆಳೆದುಬಂದಿದ್ದು! ಅಲ್ಲಿಯ ವಾತಾವರಣ, ಶುದ್ಧ ಗಾಳಿ ಇವೆಲ್ಲ ನಮ್ಮ ವಿದೇಶದ ನಗರದಲ್ಲಿ ಎಲ್ಲಿವೆ ಹೇಳು?' ಎಂದು ಸಮರ್ಥಿಸಿಕೊಳ್ಳಲು ಹೋದ. ಅದನ್ನು ಬಗ್ಗುಬಡಿಯುತ್ತ, ಮಮತಾ, 'ಅಷ್ಟು ಪ್ರೀತಿಯಿದ್ದಲ್ಲಿ ಇನ್ನುಮೇಲೆ ನೀವೊಬ್ಬರೇ ಹೋಗಿ. ನನ್ನನ್ನು ಕರೆಯಬೇಡಿ!' ಮಹೇಶ ತನ್ನ ವಾದವನ್ನು ನಿಲ್ಲಿಸಿ ತೆಪ್ಪಗಾದ.

ಇಬ್ಬರ ಸಂಭಾಷಣೆಯ ತುಣುಕಿನ ಹಿಂದೆ ಅಡಗಿರುವ ಭಾವನೆಗಳನ್ನು ಗುರುತಿಸಲು ನೋಡಿದೆ. ಮಮತಾಳ ಸ್ವರದಲ್ಲಿ ಅನನುಕೂಲತೆಗಳ ಬಗೆಗೆ ಆತಂಕವಿತ್ತೇನೋ ನಿಜ. ಆದರೆ ಅದನ್ನು ತೋರಿಸುವ ಕ್ರಮದಲ್ಲಿ ಮಹೇಶನ ಬಗೆಗೆ ಅಸಡ್ಡೆ ಇಣುಕುತ್ತಿತ್ತು. ಅವಹೇಳನ ಇತ್ತು. ಇದರಿಂದ ಮಹೇಶನ ಆತ್ಮಗೌರವಕ್ಕೆ ಧಕ್ಕೆಯಾಗಿ, ದಿಗ್ಭ್ರಮೆ-ಆತಂಕ ಹುಟ್ಟಿತು. ಆಗ ಆತ ಏನು ಮಾಡಿದ? ವಾದದಿಂದ ಹಿಂತೆಗೆದ.

ಜಗಳಗಳ ಕಾರಣಕ್ಕೆ ಒಂದು ಮಾತು: ಸಂಗಾತಿಗಳ ನಡುವೆ ಅಭಿಪ್ರಾಯ ಭೇದವಾದಾಗ ಜಗಳ ಶುರುವಾಗುತ್ತದೆ ಎಂದು ಹೆಚ್ಚಿನವರು ನಂಬುತ್ತಾರೆ. ಅದಷ್ಟು ಸರಿಯಲ್ಲ. ಒಮ್ಮತ ಅಸಾಧ್ಯವೆಂದು ಅರಿವಾದಾಗ, 'ನಾವು ಒಪ್ಪದಿರಲು ಒಪ್ಪುತ್ತೇವೆ' ಎನ್ನುತ್ತ ಸುಮ್ಮನಾಗಬಹುದಲ್ಲವೆ? ಆದರೂ ಜಗಳಕ್ಕೆ ಯಾಕೆ ಕೈಹಾಕುತ್ತೇವೆ? ಸಂಗಾತಿಯ ಅಭಿಮತಕ್ಕೆ ಪ್ರತಿಯಾಗಿ ನಮ್ಮೊಳಗೆ ಪ್ರತಿರೋಧ ಭಾವ ಉಂಟಾದಾಗ ಇದನ್ನು ಹೇಗೆ ಎದುರಿಸಲಿ ಎಂದು ನಮ್ಮೊಳಗೇ ಆತಂಕ ಉಂಟಾದಾಗ ಹೆಚ್ಚಿನ ಎದೆಬಡಿತ, ಕೈಕಾಲು ನಡುಕ ಇತ್ಯಾದಿ ಶಾರೀರಿಕ ಬದಲಾವಣೆಗಳು ಹುಟ್ಟುತ್ತವೆ. ಈ ಬದಲಾವಣೆಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು ನಮ್ಮ ಕೈಯಲ್ಲಿಲ್ಲ. ಆದರೆ, 'ನನ್ನ ಆತಂಕವನ್ನು ಮಿತಿಯಲ್ಲಿ ಇಟ್ಟುಕೊಳ್ಳಲು ಆಗುತ್ತಿಲ್ಲ. ಭಯವಾಗುತ್ತಿದೆ!' ಎಂದು ಬಾಯಿಬಿಟ್ಟು ಒಪ್ಪಿಕೊಂಡರೆ ಸೋತಂತೆ. ತಮ್ಮ ದೋಷವನ್ನು ಸಂಗಾತಿಯ ಮೇಲೆ ಹೊರಿಸುವುದು ಸುಲಭ ಅಲ್ಲವೆ? ಹಾಗಾಗಿ ನಮ್ಮೊಳಗಿನ ಆತಂಕವನ್ನು ಸಂಗಾತಿಯೇ ಕಾರಣ ಎನ್ನುವಂತೆ ಕೋಪ, ಅವಹೇಳನ, ಆಕ್ರೋಶಗಳ ಮೂಲಕ ಹೊರಹಾಕುತ್ತೇವೆ. ಸಂಗಾತಿಯೂ ಅದನ್ನೇ ಮಾಡುವುದರಿಂದ ಜಗಳ ಶುರುವಾಗುತ್ತದೆ.

ಚಿಕ್ಕದಾಗಿ ಹೇಳಬೇಕೆಂದರೆ, ಅಭಿಪ್ರಾಯ ಭೇದ ಉಂಟಾದಾಗ ಸಂಗಾತಿಗಳು ತಮ್ಮ ಆತಂಕವನ್ನು ವೈಯಕ್ತಿಕವಾಗಿ ಹೇಗೆ ನಿಭಾಯಿಸುತ್ತಾರೆ ಎಂಬುದರ ಮೇಲೆ ಜಗಳದ ತೀವ್ರತೆಯು ನಿರ್ಧಾರವಾಗುತ್ತದೆ. ಮಮತಾ ತನ್ನ ಆತಂಕವನ್ನು ಮಹೇಶನೊಂದಿಗೆ ಹಂಚಿಕೊಳ್ಳದೆ ಕೋಪ, ಬಯ್ಗುಳು, ಅವಹೇಳನದ ಮೂಲಕ ನಿಭಾಯಿಸಿದರೆ, ಮಹೇಶ ತನ್ನ ಆತಂಕವನ್ನು ವಾಗ್ವಾದದಿಂದ ಹಿಂತೆಗೆದುಕೊಳ್ಳುವ ಮೂಲಕ ನಿಭಾಯಿಸಿದ.

ಇಲ್ಲೊಂದು ಪ್ರಶ್ನೆ: ಹೀಗೆ ಆತಂಕವನ್ನು ನಿಭಾಯಿಸುವ ಕೌಶಲ್ಯವನ್ನು ನಾವು ಎಲ್ಲಿಂದ ಕಲಿಯುತ್ತೇವೆ? ಇದಕ್ಕೂ ಬಾಲ್ಯದಲ್ಲಿ ಹಿರಿಯರೊಡನೆ ಇಟ್ಟುಕೊಂಡ ನಂಟಿಗೂ ಅವಿನಾಭಾವ ಸಂಬಂಧವಿದೆ.

'ಸುಖೀ ದಾಂಪತ್ಯ'ಕ್ಕೆ ತಡವಾಗಿ ಬಂದವರಿಗಾಗಿ ನಂಟಿನ ಬಗೆಗೆ ಚಿಕ್ಕದಾಗಿ ಹೇಳಿಬಿಡುತ್ತೇನೆ. ಮಗುವಾಗಿರುವಾಗ ನಮಗೆ ದೊರಕುವ ಪ್ರೀತಿ-ವಾತ್ಸಲ್ಯಗಳ ಪ್ರಕಾರ ಪ್ರಬುದ್ಧ ಭಾವನಾತ್ಮಕ ಸಂಬಂಧಗಳಲ್ಲಿ ಹುಟ್ಟುವ ಆತಂಕವನ್ನು ನಿಭಾಯಿಸುವ ಗುಣವನ್ನು ಬೆಳೆಸಿಕೊಳ್ಳುತ್ತೇವೆ. ಪ್ರೀತಿ-ವಾತ್ಸಲ್ಯಗಳು ಯಥೇಷ್ಟ ಸಿಕ್ಕಾಗ ಆತ್ಮಗೌರವವು ಹೆಚ್ಚಾಗಿ, ಆತಂಕವನ್ನು ಸೂಕ್ತವಾಗಿ ನಿಭಾಯಿಸುತ್ತ ಸಂಬಂಧವನ್ನು ಉಳಿಸಿಕೊಳ್ಳುವ ಗುಣ ಬೆಳೆಯುತ್ತದೆ. ಪ್ರೀತಿ-ವಾತ್ಸಲ್ಯಗಳ ಅಭಾವವಾದರೆ ಹುಟ್ಟುವ ಆತಂಕವು, ಪ್ರಬುದ್ಧ ಸಂಬಂಧಗಳಲ್ಲೂ ಇಣುಕುತ್ತ ಅನಗತ್ಯ ಆತಂಕ-ಅನಿಶ್ಚಿತತೆಗಳನ್ನು ಹುಟ್ಟಿಸುತ್ತದೆ. ಪ್ರೀತಿ-ವಾತ್ಸಲ್ಯಗಳು ಸಿಕ್ಕದೆ ಅಲಕ್ಷ್ಯಕ್ಕೊಳಗಾದಾಗ ಪ್ರೀತಿಯನ್ನು ಬಯಸುವುದಕ್ಕೆ ಭಯವಾಗಿ ಒಂಟಿತನ ಬೆಳೆಸಿಕೊಳ್ಳುತ್ತ, ಮುಂದೆ ಬಾಂಧವ್ಯದಲ್ಲಿ ತೊಡಗುವುದಕ್ಕೇ ಭಯವಾಗುತ್ತದೆ. ಅಲಕ್ಷ್ಯವಲ್ಲದೆ ಹಿಂಸೆಗೂ ಒಳಗಾಗಿ ಬೆಳೆದವರು ಪ್ರೀತಿಗೆ ಹಲುಬುತ್ತ ಅದು ಸಿಕ್ಕಾಗ ಭಯದಿಂದ ತಿರಸ್ಕರಿಸುವ ಸ್ವಭಾವ ಬೆಳೆಸಿಕೊಳ್ಳುತ್ತಾರೆ.

ಮಮತಾ ಹಾಗೂ ಮಹೇಶ ಯಾವ ನಮೂನೆಯ ನಂಟುಗಳನ್ನು ಬೆಳೆಸಿಕೊಂಡಿದ್ದಾರೆ? ಮಮತಾಳನ್ನು ಆಕೆಯ ತಾಯಿ ಮೊದಲಿನಿಂದಲೂ ಕಡೆಗಣಿಸುತ್ತ, ಆಕೆಯ ತಮ್ಮನಿಗೇ ಪ್ರೀತಿ ತೋರಿಸಿದ್ದಾಳೆ. ಖಿನ್ನತೆಯ ಸ್ವಭಾವದ ಅಪ್ಪ ಆಕೆ ಚಿಕ್ಕವಳಿರುವಾಗ ಆತ್ಮಹತ್ಯೆ ಮಾಡಿಕೊಂಡು ಜಾಗ ಬರಿದುಮಾಡಿ ಹೋಗಿದ್ದಾನೆ. ನಂತರ ತಾಯಿಗೆ ವರ್ಗವಾಗಿ, ಮಗನೊಂದಿಗೆ ಬೇರೆ ಊರಿಗೆ ಹೋದಾಗ ಮಮತಾ ದೊಡ್ಡಪ್ಪನ ಮನೆಯಲ್ಲಿ ಇರಬೇಕಾದ ಪ್ರಸಂಗ ಬಂದಿದೆ. ಅಲ್ಲಿ ದೊಡ್ಡಪ್ಪನ ಮಗ ಇವಳನ್ನು ಲೈಂಗಿಕವಾಗಿ ಬಳಸಿಕೊಳ್ಳಲು ಯತ್ನಿಸಿದ್ದಾನೆ. ಇವಳು ಪ್ರತಿರೋಧ ತೋರಿದ್ದಾಳೆ. ಅನಾಥಪ್ರಜ್ಞೆಯನ್ನು ಅದುಮಿಟ್ಟು ಬದುಕಲು ಅವಿರತ ಹೋರಾಟ ನಡೆಸಿದ್ದಾಳೆ. ಹಾಗಾಗಿ ಯಾರಾದರೂ ಇವಳನ್ನು ಸ್ವಲ್ಪ ಮೂಲೆಗೊತ್ತಲು ಅಥವಾ ಅಲಕ್ಷ್ಯ ಮಾಡಲು ಪ್ರಯತ್ನಿಸಿದರೆ, ಕೋಪದಿಂದ ಕೆರಳಿ ಹೀನೈಸುತ್ತಾಳೆ. ಗಂಡ ಕೂಡ ಈಕೆಗೆ ಗಯ್ಯಾಳಿ ಎಂದು ಹೆಸರಿಡಲು ಹೋಗಿ, ಏಟುತಿಂದು ತೆಪ್ಪಗಾಗಿದ್ದಾನೆ.

ಇನ್ನು, ಮಹೇಶ ಬಾಲ್ಯದಲ್ಲೂ ಇಂಥದ್ದೇ ನಡೆದಿದೆ. ಮಹೇಶನ ತಾಯಿಗೆ ಎಳೆಯ ಮಕ್ಕಳ ಜವಾಬ್ದಾರಿ ನಿರ್ವಹಿಸುವ ಹೋರಾಟದಲ್ಲಿ ಮಕ್ಕಳ ಮೇಲೆ ಪ್ರೀತಿಯನ್ನು ತೋರಿಸಲಾಗಿಲ್ಲ. ಮಹೇಶನಿಗೆ ಬಾಲ್ಯದಲ್ಲಿಯೇ ಜವಾಬ್ದಾರಿ ಬಂದಿದ್ದರಿಂದ ಸ್ವಚ್ಛಂದದಿಂದ ಬೆಳೆಯಲು ಆಗಿಲ್ಲ. ಬಾಲಕನಾಗಿರುವಾಗಲೇ ಪ್ರಬುದ್ಧತೆ ಬಂದಿರುವುದರಿಂದ ಪ್ರೀತಿಯ ಜಾಗದಲ್ಲಿ ಜವಾಬ್ದಾರಿ ತೋರಿಸುತ್ತಿದ್ದಾನೆ.

ಮದುವೆಯ ನಂತರ ಮಹೇಶ ಮಮತಾಳೊಡನೆ ಮಾತಾಡುವಾಗ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುವ ಕನಸನ್ನು ಹಂಚಿಕೊಳ್ಳುತ್ತ ಹೆಂಡತಿಯ ಸಹಕಾರ ಬಯಸಿದ್ದಾನೆ. ಪ್ರೀತಿಯನ್ನು ಬಯಸಿ ಮದುವೆಯಾಗಿದ್ದ ಮಮತಾಳಿಗೆ ಅದು ಸಿಕ್ಕದೆ, ಅತ್ತೆಗೆ ಪ್ರೀತಿ ತೋರಿಸಬೇಕೆಂಬ ಜವಾಬ್ದಾರಿ ಬಂದಾಗ ಸಹಿಸದೆ ಗಂಡನನ್ನು ಹೀಗಳೆಯಲು ಶುರುಮಾಡಿದ್ದಾಳೆ. ಹಾಗಾಗಿ ಇಬ್ಬರ ನಡುವೆ ಘರ್ಷಣೆ ಆಗುತ್ತಿದೆ.

ಇವರ ಸಮಸ್ಯೆಯನ್ನು ಹೇಗೆ ಬಗೆಹರಿಸಿದೆ ಎಂದು ಮುಂದಿನ ಸಲ ವಿವರಿಸುತ್ತೇನೆ.

ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: **8050255229** (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: **8494944888** (11ರಿಂದ ಸಂಜೆ 5ರ ತನಕ). ದಾಂಪತ್ಯ ಸಮಸ್ಯೆಗಳ ಪರಿಹಾರಕ್ಕೆ 'ಸುಧಾ'ಕ್ಕೆ ಪತ್ರ ಬರೆಯಬಹುದು.